**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 16.08.2021.

**1] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನೆ ನಂ: 136/2021 ಕಲಂ: 279, 304 (ಎ) ಐಪಿಸಿ**

ದಿನಾಂಕ: 14.08.2021 ರಂದು ಸಾಯಂಕಾಲ 07.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಸಲೀಮ ತಂದೆ ಅಲ್ಲಿಸಾಬ ನಾಲತವಾಡ ವಯಾ-25 ವರ್ಷ, ಜಾತಿ ಮುಸ್ಲಿಂ, ಉದ್ಯೋಗ: ಮೆಕ್ಯಾನಿಕ್ ಸಾ: ಮರೋಳ ತಾ: ಹುನಗುಂದ ಜಿ: ಬಾಗಲಕೋಟೆ ಮೋಟರ್ ಸೈಕಲ ಚೆಸ್ಸಿ ನಂ: 03ಸಿ20ಎಫ್06798, ಇಂಜಿನ್ ನಂ: 03ಸಿ18ಇ11038 ನೇದ್ದರ ಸವಾರ. (ಮೃತ) ಈತನು ಮುದ್ದೇಬಿಹಾಳದಲ್ಲಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದು ದಿನಾಲೂ ಮರೋಳಕ್ಕೆ ಹೋಗುವುದು ಬಂದು ಮಾಡುತ್ತಿದ್ದನು. ನಿನ್ನೆ ಮುದ್ದೇಬಿಹಾಳ ಕಡೆಯಿಂದ ತಂಗಡಗಿ ಕಡೆಗೆ ಹೋಗುವ ಸಲುವಾಗಿ ತನ್ನ ತಾಬಾ ಇದ್ದ ಮೋಟರ್ ಸೈಕಲ ನೇದ್ದನ್ನು ಅತೀ ಜೋರಿನಿಂದ, ನಿರ್ಲಕ್ಷ್ಯತನದಿಂದ, ಹಾಗೂ ಮಾನವೀಯ ಜೀವಕ್ಕೆ ಅಪಾಯವಾಗುವ ಹಾಗೇ ಚಲಾಯಿಸಿಕೊಂಡು ಹೊರಟು ಗಂಗೂರ ಕ್ರಾಸ್ ಹತ್ತಿರ ತಾನು ನಡೆಸುತ್ತಿದ್ದ ಮೋಟಾರ ಸೈಕಲ್ ಸ್ಕಿಡ್ ಮಾಡಿಕೊಂಡು ಬಿದ್ದು ಅಪಘಾತವಾಗಿ ತನ್ನ ತಲೆಗೆ, ಎಡಗೈ ರಟ್ಟೆಗೆ ಭಾರಿ ಗಾಯಪೆಟ್ಟು, ಎಡಗಾಲಿಗೆ ತೆರೆಚಿದ ಗಾಯವಾಗಿ ಭಾರಿ ರಕ್ತ ಸ್ರಾವವಾಗಿದ್ದು, ಉಪಚಾರ ಕುರಿತು ಕೆ,ಆರ್,ಡಿ,ಸಿ ಅಂಬುಲೇನ್ಸ ವಾಹನದಲ್ಲಿ ಮುದ್ದೇಬಿಹಾಳ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ ಉಪಚಾರ ಮಾಡಿಸಿ ಹೆಚ್ಚಿನ ಉಪಚಾರ ಕುರಿತು ನಗು-ಮಗು ಅಂಬುಲೆನ್ಸ ವಾಹನದಲ್ಲಿ ಬಾಗಲಕೋಟೆಗೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯ ಮಧ್ಯದಲ್ಲಿ ತೀರಿಕೊಂಡಿದ್ದು ಇರುತ್ತದೆ. ಈ ಬಗ್ಗೆ ಅಲಿಸಾಬ ದಾದೇಸಾಬ ನಾಲತವಾಡ ಸಾ: ಮರೋಳ ತಾ: ಹುನಗುಂದ ಜಿ: ಬಾಗಲಕೋಟೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 15.08.2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ನಿಡಗುಂದಿ ಪೊಲೀಸ ಠಾಣೆ ಗುನ್ನಾ. ನಂ: 96/2021 ಕಲಂ: 32, 34 ಕೆಇ ಆ್ಯಕ್ಟ್ & 273 ಐಪಿಸಿ**

ದಿನಾಂಕ 15.08.2021 ರಂದು 10:00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಶಂಕರ ದೇವಲಪ್ಪ ಲಮಾಣಿ ಸಾ: ದೇವಲಾಪೂರ ತಾ: ನಿಡಗುಂದಿ ಈತನು ತನಗೆ ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಮಾನವ ಸೇವನಗೆ ಯೋಗ್ಯವಲ್ಲದ ಕಳ್ಳ ಭಟ್ಟಿ ಸರಾಯಿಯನ್ನು ಪ್ಲಾಸ್ಟಿಕ ಬಾಟಲಿಗಳಲ್ಲಿ ತುಂಬಿಕೊಂಡು ತನ್ನ ತಾಬಾದಲ್ಲಿ ಇಟ್ಟುಕೊಂಡು ತನ್ನ ಪಾಯಿದೆಗೊಸ್ಕರ ಮಾರಾಟ ಮಾಡಲು ತೆಗೆದುಕೊಂಡು ಹೋರಟಾಗ ದೇವಲಾಪೂರ ಕ್ರಾಸ್ ಹತ್ತಿರ ಸಿಕ್ಕ ಅಪರಾಧ. ಜಪ್ತ ಮಾಡಿದ ಮಾಲು: 2 ಲೀಟರದ ಒಟ್ಟು 03 ಪ್ಲಾಸ್ಟಿಕ್ ಬಾಟಲಿಗಳು ಪ್ರತಿಯೊಂದರಲ್ಲಿ ಕಳ್ಳಬಟ್ಟಿ ಸರಾಯಿ ತುಂಬಿದ್ದು ಒಟ್ಟು 06 ಲೀಟರದಷ್ಟು ಕಳ್ಳಬಟ್ಟಿ ಸರಾಯಿ ಅ॥ಸ॥ಕಿ॥ 300/- ರೂ ಈ ಬಗ್ಗೆ ಸ:ತ: ಚಂದ್ರಶೇಖರ. ವಾಯ್. ಹೆರಕಲ್ ಪಿ.ಎಸ್.ಐ (ಕಾ&ಸು) ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 15.08,2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.